# ವಿಶ್ವನಂದಿನಿ ಲೇಖನಮಾಲೆ – 114

## ರಾಘವೇಂದ್ರಸ್ವಾಮಿಗಳು ಎಂಬ ಮಹಾಪ್ರಕಾಶ

ಶ್ರೀ ವಾದೀಂದ್ರತೀರ್ಥಶ್ರೀಪಾದಂಗಳವರು ಶ್ರೀ ರಾಘವೇಂದ್ರಸ್ವಾಮಿಗಳನ್ನು ಸ್ತೋತ್ರ ಮಾಡುತ್ತ ಗುರುಗುಣಸ್ತವನದಲ್ಲಿ ಒಂದು ಅದ್ಭುತವಾದ ಪ್ರಮೇಯವನ್ನು ಮಂಡಿಸುತ್ತಾರೆ –

**ಯದ್ ಭಾನೌ ಯತ್ ಕೃಶಾನೌ**
**ಯದಮೃತಕಿರಣೇ ಯದ್ ಗ್ರಹೇಷೂದಿತೇಷು**
**ಜ್ಯೋತಿರ್ಯತ್ ತಾರಕಾಸು ಪ್ರಥಿತಮಣಿಷು**
**ಯದ್ ಯಚ್ಚ ಸೌದಾಮಿನೀಷು ।**
**ಸಂಭೂಯೈತತ್ ಸಮಸ್ತಂ**
**ತ್ವದಮಿತಹೃದಯಾಕಾಶನಿರ್ಯತ್ಪ್ರಕಾಶೇ**
**ಧೀರಶ್ರೀರಾಘವೇಂದ್ರ ವ್ರತಿವರ ಭಜತೇ ಹಂತ**
**ಖದ್ಯೋತರೀತಿಮ್ ॥**

ಸೂರ್ಯನಲ್ಲಿರುವ ತೇಜಸ್ಸು, ಅಗ್ನಿಯಲ್ಲಿರುವ ಜ್ಯೋತಿ, ಚಂದ್ರನಲ್ಲಿರುವ ಕಾಂತಿ, ಬೆಳಗುವ

ಗ್ರಹಗಳಲ್ಲಿರುವ ಪ್ರಭೆ, ನಕ್ಷತ್ರಗಳ ಹೊಳಪು, ಶ್ರೇಷ್ಠ ಮಣಿಗಳು ಸೂಸುವ ಪ್ರಕಾಶ, ಮಿಂಚುಗಳಲ್ಲಿರುವ ಕಣ್ ಕುಕ್ಕಿಸುವ ಬೆಳಕು, ಈ ಎಲ್ಲವನ್ನೂ ಒಟ್ಟು ಗೂಡಿಸಿ ಒಂದು ಮಹಾಜ್ಯೋತಿ ಎಂದು ಮಾಡಿದರೆ, ಶ್ರೀ ರಾಘವೇಂದ್ರಸ್ವಾಮಿಗಳ ನಿರ್ಮಲವಾದ ಹೃದಯದಿಂದ ಹೊರಹೊಮ್ಮಿ ಬರುತ್ತಿರುವ ಅನಂತ ಪ್ರಕಾಶದ ಮುಂದೆ ಆ ಸಮಗ್ರ ಜ್ಯೋತಿಃಸಮುದಾಯ ಒಂದು ಮಿಣುಕುಹುಳದಂತಾಗಿಬಿಡುತ್ತದೆ, ಅಷ್ಟು ಪ್ರಕಾಶ ಶ್ರೀರಾಘವೇಂದ್ರಸ್ವಾಮಿಗಳದು.

ಇಲ್ಲಿ ಒಂದು ತಾತ್ವಿಕವಾದ ಸಮಸ್ಯೆಯಿದೆ, ಅದಕ್ಕೆ ಉತ್ತರವಾಗಿ ಪರಮಾದ್ಭುತ ಪ್ರಮೇಯವಿದೆ, ಶ್ರೀ ರಾಘವೇಂದ್ರಸ್ವಾಮಿಗಳ ಮಹಾಮಾಹಾತ್ಮ್ಯವಿದೆ.

ರಾಘವೇಂದ್ರಸ್ವಾಮಿಗಳಿಗೆ ಸೂರ್ಯನನ್ನೂ ಮೀರಿಸಿದ ಪ್ರಕಾಶ ಹೇಗೆ ಬರಲು ಸಾಧ್ಯ? ಬರಿಯ ಸೂರ್ಯನಲ್ಲ, ಜಗತ್ತಿನ ಸಮಗ್ರ ಜ್ಯೋತಿಃಸಮುದಾಯದ ಪ್ರಕಾಶವೂ ಅವರ ಪ್ರಕಾಶದ ಮುಂದೆ ಮಿಣುಕುಹುಳದಂತೆ

ಎನ್ನುತ್ತಿದ್ದಾರೆ ಶ್ರೀ ವಾದೀಂದ್ರತೀರ್ಥರು. ಇದನ್ನು ಹೇಗೆ ಒಪ್ಪಲು ಸಾಧ್ಯ?

ಇಲ್ಲ, ಕಂಬದಲ್ಲಿ ನರಸಿಂಹನನ್ನು ಸಾಕ್ಷಾತ್ಕರಿಸಿಕೊಂಡ ಪ್ರಹ್ಲಾದರಾಜರೇ ಶ್ರೀ ರಾಘವೇಂದ್ರಸ್ವಾಮಿಗಳಾಗಿ ಅವತರಿಸಿ ಭಕ್ತರನ್ನು ಉದ್ಧಾರ ಮಾಡುತ್ತಿದ್ದಾರೆ ಎನ್ನುವದು ನಮ್ಮೆಲ್ಲರ ಗಾಢವಿಶ್ವಾಸ. ಮತ್ತು ಅವರನ್ನು ಪ್ರಹ್ಲಾದರಾಜರ ಅವತಾರ ಎಂದು ಒಪ್ಪುವಲ್ಲಿ ಯಾವ ಬಾಧಕವೂ ಇಲ್ಲ. ಹೀಗಾಗಿ ರಾಘವೇಂದ್ರಸ್ವಾಮಿಗಳು ದೇವತೆಗಳಾದ್ದರಿಂದ ಅವರಿಗೆ ಈ ಪ್ರಕಾಶ ಬಂದಿರಲು ಸಾಧ್ಯವಿದೆ ಎಂದು ಉತ್ತರ ನೀಡಬಹುದು.

ಆದರೆ ಈ ಉತ್ತರವನ್ನೂ ಒಪ್ಪಲು ಸಾಧ್ಯವಿಲ್ಲ. ಕಾರಣ, ಪ್ರಹ್ಲಾದರಾಜರು ಹತ್ತೊಂಬತ್ತನಯ ಕಕ್ಷೆಯಲ್ಲಿ ಬರುವ ಕರ್ಮಜ ದೇವತೆಗಳು. ಅಂದಮೇಲೆ, ಸೂರ್ಯ ಚಂದ್ರ ಬೃಹಸ್ಪತಿ ಇವರೆಲ್ಲರಿಗಿಂತ ಸಣ್ಣವರು. ಹೀಗಾಗಿ ಸೂರ್ಯನಿಗಿಂತಲೂ ಮಿಗಿಲಾದ ಪ್ರಕಾಶ ಇರಲು ಸಾಧ್ಯವೇ ಇಲ್ಲ, ಇನ್ನು ಸಮಗ್ರ

ಜ್ಯೋತಿಃಸಮುದಾಯವನ್ನು ಮೀರಿದ ಪ್ರಕಾಶ ಇರಲು ಸಾಧ್ಯವೇ ಇಲ್ಲ.

ಹೀಗೆ ಸಮಸ್ಯೆ ಬೆಟ್ಟದಂತೆ ಬೆಳೆದು ನಿಲ್ಲುತ್ತದೆ. ಆದರೆ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರ ಸಿದ್ಧಾಂತ ಜಗತ್ತಿನ ಸಮಸ್ಯೆಗಳಿಗೆ ಉತ್ತರ ನೀಡಿದ ಸಿದ್ಧಾಂತ. ಎಲ್ಲ ಪ್ರಶ್ನೆಗಳನ್ನೂ ಪರಿಹರಿಸುವ ಸಿದ್ಧಾಂತ. ಆಚಾರ್ಯರ ಸಿದ್ಧಾಂತ ಈ ಪ್ರಶ್ನೆಗೆ ಉತ್ತರವನ್ನು ನೀಡುತ್ತದೆ.

ಇಲ್ಲಿ, ಶ್ರೀ ವಾದೀಂದ್ರತೀರ್ಥರು ಶ್ರೀರಾಘವೇಂದ್ರಸ್ವಾಮಿಗಳ ದೇಹಕ್ಕೆ ಅಷ್ಟು ಪ್ರಕಾಶವಿದೆ ಎಂದು ಹೇಳುತ್ತಿಲ್ಲ. ನಿಜ, ಶ್ರೀ ರಾಘವೇಂದ್ರಸ್ವಾಮಿಗಳ ದೇಹಕ್ಕಾಗಲೀ ಅಥವಾ ಅವರ ಮೂಲರೂಪವಾದ ಪ್ರಹ್ಲಾದರಾಜರ ದೇಹಕ್ಕಾಗಲೀ ಸೂರ್ಯನನ್ನು ಮೀರಿಸುವ ಪ್ರಕಾಶ ಬರಲು ಸಾಧ್ಯವಿಲ್ಲ. ಆದರೆ ಇಲ್ಲಿ ದೇಹದ ಪ್ರಕಾಶದ ಕುರಿತ ಮಾತೇ ಇಲ್ಲ. ಇಲ್ಲಿ ಹೇಳುತ್ತಿರುವದು **ಅಮಲಹೃದಯಾ-ಕಾಶನಿರ್ಯತ್ಪ್ರಕಾಶೇ** ಎಂದು. ರಾಘವೇಂದ್ರಸ್ವಾಮಿಗಳ ಹೃದಯಾಕಾಶದಿಂದ

ಹೊರಹೊರಟ ಪ್ರಕಾಶದ ಕುರಿತು ಶ್ರೀ ವಾದೀಂದ್ರತೀರ್ಥರು ಮಾತನಾಡುತ್ತಿದ್ದಾರೆ.

ಶ್ರೀ ರಾಘವೇಂದ್ರಸ್ವಾಮಿಗಳು ಹೃದಯದಲ್ಲಿ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡ ಯೋಗಿವರೇಣ್ಯರು. “ಅಪರೋಕ್ಷೀಕೃತಶ್ರೀಶಃ” ಎಂದು ಶ್ರೀ ರಾಯರ ಸಾಕ್ಷಾತ್ ಶಿಷ್ಯರಾದ ಶ್ರೀ ಅಪ್ಪಣಾಚಾರ್ಯರು ತಮ್ಮ ಕೃತಿಯಲ್ಲಿ ದಾಖಲಿಸಿಟ್ಟಿದ್ದಾರೆ. ಹೀಗಾಗಿ ಅಪರೋಕ್ಷಜ್ಞಾನಿಗಳ ಜ್ಞಾನದ ಪ್ರಕಾಶದ ಮುಂದೆ ಜಗತ್ತಿನ ಸಮಸ್ತಪ್ರಕಾಶವೂ ಮಿಣುಕುಹುಳಕ್ಕೇ ಸಮವಾಗುತ್ತದೆ. ಇದು ಶ್ರೀಮದಾಚಾರ್ಯರ ಸಿದ್ಧಾಂತ. ಇದನ್ನು ದೃಷ್ಟಾಂತಸಮೇತವಾಗಿ ತಿಳಿಯೋಣ.

ನಮ್ಮ ಮನೆಯಲ್ಲಿ ದೀಪದ ಬೆಳಕಿರುತ್ತದೆ. ದೀಪದ ಬೆಳಕಿನಲ್ಲಿ ಅಷ್ಟಿಷ್ಟು ಕೆಲಸ ಮಾಡುತ್ತೇವೆ. ರಾತ್ರಿಯ ಹೊತ್ತು ಚಂದ್ರನ ಬೆಳದಿಂಗಳು ಚಲ್ಲಿರುತ್ತದೆ. ಆಸ್ವಾದಿಸಲು ಚಂದ. ಆದರೆ ಹಗಲಿನಲ್ಲಿ ಕೆಲಸ ಮಾಡುವಂತೆ ಕೆಲಸ ಮಾಡಲು ಸಾಧ್ಯವಿಲ್ಲ. ಸೂರ್ಯನ ಬೆಳಕಿನಲ್ಲಿ ಎಲ್ಲ

ಕಾರ್ಯಗಳನ್ನೂ ಮಾಡುತ್ತೇವೆ, ಹೀಗಾಗಿ ಸೂರ್ಯನ ಬೆಳಕು ಜಗತ್ತಿನಲ್ಲಿರುವ ಎಲ್ಲ ಬೆಳಕುಗಳಿಗಿಂತಲೂ ಶ್ರೇಷ್ಠವಾದದ್ದು. ಇವತ್ತಿನ ದಿವಸ ultraviolet rays ಗಳು ಮತ್ತು X-ray ಗಳ ಬಳಕೆಯಿವೆ. ಮನುಷ್ಯನ ದೇಹವನ್ನು ಸೀಳದೇ, ಹರಿಯದೇ, ದೇಹದ ಒಳಗಿರುವ ಮೂಳೆಯನ್ನು ಆ ಬೆಳಕಿನ ಮುಖಾಂತರ ನೋಡಬಹುದು. ಅಂದಮೇಲೆ ಅದರದೊಂದು ವಿಶಿಷ್ಟವಾದ ಶಕ್ತಿಯಿದೆ ಎಂದಾಯಿತು. ಅದಕ್ಕೇ ಅದರ ಸ್ಥಾನವೂ ಹೆಚ್ಚಾಯಿತು.

ಆದರೆ, ಎಷ್ಟು ಸೂರ್ಯನ ಬೆಳಕು ಹಾಯ್ದರೂ, ಅದೆಂಥಾ ultraviolet rays ಗಳನ್ನು ಹಾಯಿಸಿದರೂ ದೂರವಾಗದ ಕತ್ತಲೆಯೊಂದಿದೆ. ಅದು ನಮ್ಮೊಳಗಿನ ಕತ್ತಲೆ. ನಮ್ಮ ಹೃದಯದೊಳಗಿನ ಕತ್ತಲೆ. ಆ ಕತ್ತಲೆಯನ್ನು ನೀಗಲಿಕ್ಕೆ ಶಾಸ್ತ್ರಗಳಿಗೆ ಮಾತ್ರ ಸಾಧ್ಯ. ಶಾಸ್ತ್ರದ ನಿರಂತರ ಅಧ್ಯಯನವನ್ನು ಮಾಡಿ ಕಣ್ಣು ಮುಚ್ಚಿ ಶಾಸ್ತ್ರದಿಂದ ಪ್ರತಿಪಾದ್ಯನಾದ ಪರಮಾತ್ಮನನ್ನ ಧ್ಯಾನಿಸತೊಡಗಿದರೆ ಹೃದಯದ ಒಳಗಣ ಕತ್ತಲೆ ಕಳೆಯಲು ಆರಂಭಿಸುತ್ತದೆ. ಆ ಶಾಸ್ತ್ರ ಜ್ಞಾನದ

ಬೆಳಕಿನಲ್ಲಿ ಭಕ್ತಿಯಿಂದ ಪರಮಾತ್ಮನನ್ನು ಧ್ಯಾನಿಸುತ್ತಿರುವಾಗ ಪರಮಾತ್ಮ ಹೃದಯಕಮಲದ ಮಧ್ಯದಲ್ಲಿ ಗೋಚರಿಸುತ್ತಾನೆ, ಅವನ ಸಾಕ್ಷಾತ್ಕಾರ ಉಂಟಾಗುತ್ತದೆ. ಅದನ್ನೇ ಅಪರೋಕ್ಷಜ್ಞಾನ ಎನ್ನುತ್ತಾರೆ.  ಆ ಅಪರೋಕ್ಷಜ್ಞಾನ ಎಂಬ ಬೆಳಕು, ಕಳೆಯಲಿಕ್ಕೆ ಸಾಧ್ಯವಿಲ್ಲದ ಕತ್ತಲೆಯನ್ನು ಕಳೆದಿದೆಯಾದ್ದರಿಂದ, ಕಾಣಲಿಕ್ಕೆ ಸಾಧ್ಯವಿಲ್ಲದ ಪರಮಾತ್ಮನನ್ನು ಕಾಣಿಸಿದೆಯಾದ್ದರಿಂದ, ಆ ಅಪರೋಕ್ಷಜ್ಞಾನ ಎಂಬ ಬೆಳಕಿಗೆ ಸಾಟಿಯಾದ ಬೆಳಕು ಮತ್ತೊಂದಿರಲು ಸಾಧ್ಯವೇ ಇಲ್ಲ.

ಮತ್ತೂ, ಸೂರ್ಯನ ಬೆಳಕು ಮೂರು ಲೋಕಗಳಿಗೆ ಸೀಮಿತ. ಅಗ್ನಿಯ ಬೆಳಕು ಅದರ ಪ್ರಕಾಶ ಹರಡುವವರೆಗೆ ಸೀಮಿತ. ಚಂದ್ರನ ಬೆಳಕು ಹುಣ್ಣಿಮೆಗೆ ಶುಕ್ಲಪಕ್ಷಕ್ಕೆ ಸೀಮಿತ. ಗ್ರಹ ನಕ್ಷತ್ರಗಳ ಬೆಳಕು ರಾತ್ರಿಗೆ ಮಾತ್ರ ಸೀಮಿತ. ಆದರೆ, ಅಪರೋಕ್ಷಜ್ಞಾನದಿಂದ ಹೊರಹೊಮ್ಮಿ ಬರುವ ಬೆಳಕು ಅಮಿತ. ಅದಕ್ಕೆ ಶ್ರೀ ವಾದೀಂದ್ರತೀರ್ಥರು ಅಮಿತ ಎಂಬ ಶಬ್ದವನ್ನು ಬಳಸಿದರು.

ಹನ್ನೆರಡು ಜನ ಸೂರ್ಯರು ಒಟ್ಟಿಗೇ ಉದಿಸಿದರೂ, ಬ್ರಹ್ಮಾಂಡವನ್ನೇ ಹೊತ್ತಿ ಉರಿಸುವಷ್ಟು ಅಗ್ನಿಯ ಜ್ವಾಲೆಯಿದ್ದರೂ, ಅನಂತನಕ್ಷತ್ರಗ್ರಹಗಳ ಪ್ರಭೆಯಿದ್ದರೂ, ಜಗತ್ತಿನ ಸಮಸ್ತ ಮಣಿಗಳ ಪ್ರಕಾಶ ಒಟ್ಟಿಗೇ ಸೇರಿದರೂ, ಅನಂತಕಾಲದಲ್ಲಿ ಬೇರೆಬೇರೆ ಸಂದರ್ಭಗಳಲ್ಲಿ ಬರುವ ಎಲ್ಲಾ ಅನಂತ ಮಿಂಚುಗಳ ಪ್ರಕಾಶ ಒಮ್ಮೆಗೇ ಪ್ರಜ್ವಲಿಸಿದರೂ ನಮ್ಮ ಹೃದಯದ ಅಂಧಕಾರ ಕಳೆಯುವದಿಲ್ಲ. ಆದರೆ, ಸ್ವಾಂತ-ಧ್ವಾಂತ-ನಿಕೃಂತನವಾದ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರ ಸೂತ್ರಭಾಷ್ಯದ ಅಧ್ಯಯನ, ಮನನಗಳಿಂದ ಉಂಟಾದ ಭಕ್ತಿ ಜ್ಞಾನಗಳ ಬೆಳಕಿನಿಂದ ಹೃದಯದ ಕತ್ತಲೆ ಕಳೆದು ಅಂತರ್ಯಾಮಿ ಗೋಚರಿಸುತ್ತಾನೆ. ಕತ್ತಲೆಯ ಗೂಡಾಗಿದ್ದ ನಮ್ಮ ಹೃದಯ ಜ್ಞಾನದ ಮಂದಿರವಾಗುತ್ತದೆ. ಹೀಗಾಗಿ ಆ ಜ್ಞಾನದ ಮಂದಿರದ ಬೆಳಕು, ಅರ್ಥಾತ್ ಅಪರೋಕ್ಷಜ್ಞಾನದ ಬೆಳಕು ಸಮಗ್ರ ಜಗತ್ತಿನ ಜ್ಯೋತಿಃಸಮುದಾಯದ ಬೆಳಕಿಗಿಂತಲೂ ಸರ್ವೋತ್ತಮವಾದ ಬೆಳಕು.

ಈ ಬೆಳಕನ್ನು ಜಗತ್ತಿನ ಸಮಸ್ತ ಸಜ್ಜನರೂ ಪಡೆಯುತ್ತಾರೆ. ಸಜ್ಜನರಾದ ಚಾಂಡಾಲರೂ

ಪಡೆಯುತ್ತಾರೆ, ಶೂದ್ರರೂ ಪಡೆಯುತ್ತಾರೆ, ವೈಶ್ಯ ಕ್ಷತ್ರಿಯರೂ ಪಡೆಯುತ್ತಾರೆ, ಸ್ತ್ರೀಯರೂ ಪಡೆಯುತ್ತಾರೆ, ಬ್ರಾಹ್ಮಣರೂ ಪಡೆಯುತ್ತಾರೆ, ರಾಜರು, ಚಕ್ರವರ್ತಿಗಳೂ ಪಡೆಯುತ್ತಾರೆ, ಋಷಿಗಳೂ ಪಡೆಯುತ್ತಾರೆ, ದೇವತೆಗಳೂ ಪಡೆಯುತ್ತಾರೆ. ಎಲ್ಲರ ಸಾಕ್ಷಾತ್ಕಾರದ ಪ್ರಕಾಶವೂ ಸೂರ್ಯಪ್ರಕಾಶಕ್ಕಿಂತಲೂ ಮಿಗಿಲಾದದ್ದೇ. ಆದರೆ, ಅದರಲ್ಲಿಯೂ ತಾರತಮ್ಯವಿದೆ. ನಮ್ಮ ಅಪರೋಕ್ಷಜ್ಞಾನಕ್ಕಿಂತ ನಮ್ಮ ಗುರುಗಳ ಅಪರೋಕ್ಷಜ್ಞಾನ ದೊಡ್ಡದು. ಅವರ ಅಪರೋಕ್ಷಜ್ಞಾನಕ್ಕಿಂತ ಅವರ ಗುರುಗಳ ಅಪರೋಕ್ಷಜ್ಞಾನ ಇನ್ನೂ ಮಹತ್ತಾದದ್ದು. ಹೀಗಾಗಿ ಆ ಅಪರೋಕ್ಷಜ್ಞಾನದ ಪ್ರಕಾಶವೂ ಹಿರಿದಾಗುತ್ತ ಹೋಗುತ್ತದೆ.

ನಮ್ಮ ಶ್ರೀ ರಾಘವೇಂದ್ರಸ್ವಾಮಿಗಳು ಕರ್ಮಜ ದೇವತೆಯಾದ ಪ್ರಹ್ಲಾದನ ಅವತಾರ. ಗಂಗಾದಿ ದೇವತೆಗಳ ಮಾಹಾತ್ಮ್ಯಕ್ಕಿಂತ ಮಿಗಿಲಾದ ಮಾಹಾತ್ಮ್ಯ ಅವರದು. ಅವರ ಹೃದಯದ ಆಕಾಶದಿಂದ ಹೊರಹೊರಟ ಜ್ಞಾನದ ಪ್ರಭೆಗೆ ಸಾವಿರಾರು ಜನರಿಗೆ ಅಪರೋಕ್ಷಜ್ಞಾನವನ್ನು

ಕರುಣಿಸುವ ಸಾಮರ್ಥ್ಯವಿದೆ. ಲಕ್ಷಾಂತರ ಜನರಲ್ಲಿ ಭಗವದ್ಭಕ್ತಿಯನ್ನು ಉದ್ದೀಪನ ಗೊಳಿಸುವ ಸಾಮರ್ಥ್ಯವಿದೆ. ಕೋಟ್ಯಂತರ ಭಕ್ತರ ಅಹಂಕಾರ, ಕಾಮ, ಕ್ರೋಧಗಳೆಂಬ ಕತ್ತಲನ್ನು ಕಳೆಯುವ ಸಾಮರ್ಥ್ಯವಿದೆ. ಅನಂತಭಕ್ತರ ಪಾಪರಾಶಿಯನ್ನು ಸುಟ್ಟುಹಾಕುವಷ್ಟು ಸಾಮರ್ಥ್ಯವಿದೆ. ಅದಕ್ಕಾಗಿ ಶ್ರೀ ವಾದೀಂದ್ರತೀರ್ಥರು ಸ್ತೋತ್ರ ಮಾಡಿದರು — ನಿಮ್ಮ ಜ್ಞಾನಪ್ರಕಾಶದ ಮುಂದೆ ಜಗತ್ತಿನ ಸಮಸ್ತ ಜ್ಯೋತಿಃಸಮುದಾಯದ ಬೆಳಕೂ ಒಂದು ಸಣ್ಣ ತುಣುಕಿನಂತೆ ಎಂದು.

ಶ್ರೀ ನರಸಿಂಹನ ಮುಂದೆ ಪ್ರಹ್ಲಾದರಾಜರು ಒಂದು ಮಾತನ್ನು ಹೇಳುತ್ತಾರೆ  — **ನೈತಾನ್ ವಿಹಾಯ ಕೃಪಣಾನ್ ವಿಮುಮುಕ್ಷ ಏಕಃ** ಎಂದು. “ಸ್ವಾಮಿ ಪ್ರಾಪಂಚಿಕ ವಿಷಯದ ಭೋಗದಲ್ಲಿ ಆಸಕ್ತರಾದ ನನ್ನ ಈ ಜನರನ್ನು ಹೀಗೇ ಬಿಟ್ಟು ನಾನು ಮೋಕ್ಷಕ್ಕೆ ಬರುವದಿಲ್ಲ, ಅವರಿಗೂ ಉದ್ಧಾರದ ಮಾರ್ಗ ತೋರಿ, ನನ್ನೊಡನೆ ಕರೆದುಕೊಂಡು ಬರುತ್ತೇನೆ” ಎಂದು. ಅದೆಂಥ ಕಾರುಣ್ಯ ಆ ಮಹಾನುಭಾವರದು.

ನಮಗಾಗಿ ಅವತರಿಸಿಬಂದು, ಉದ್ಧಾರವಾದರೆ ಶಾಸ್ತ್ರದ ಅಧ್ಯಯನದಿಂದಲೇ ಉದ್ಧಾರ ಎನ್ನುವ ತತ್ವವನ್ನು ಮನಗಾಣಿಸಲು ಸ್ವಯಂ ತಾವು ಇಡಿಯ ಜೀವನದಲ್ಲಿ ಶಾಸ್ತ್ರದ ಅಧ್ಯಯನಶೀಲರಾಗಿ, ನಮಗಾಗಿ ತಿಳಿಯಾದ ಭಾಷೆಯಲ್ಲಿ ಗ್ರಂಥಗಳನ್ನು ರಚಿಸಿ ವೇದಾಂತಶಾಸ್ತ್ರದ ಮರ್ಮವನ್ನು ಬೋಧಿಸಿ, ಬ್ರಹ್ಮತತ್ವವನ್ನು ಉಪದೇಶಿಸಿ, ನಮ್ಮನ್ನು ಕಾಪಾಡಲು ಗ್ರಂಥಗಳ ರೂಪದಲ್ಲಿ ಸನ್ನಿಹಿತರಾಗಿದ್ದು ನಮ್ಮೊಡನೆಯೇ ಇದ್ದಾರೆ.

ಆ ಮಹಾನುಭಾವರನ್ನು ಭಕ್ತಿಯಿಂದ ಬೇಡಿಕೊಳ್ಳೋಣ — **ಸ್ವಾಮಿ, ಸಂಸಾರಸಾಗರದಿಂದ ನಮ್ಮನ್ನು ಉದ್ಧರಿಸಿ** ಎಂದು.

ಸಂಸಾರದ ಕಷ್ಟಕೋಟಲೆಗಳನ್ನು ಅರುಹಿಕೊಂಡು, ರೋಗ ಪರಿಹರಿಸಿ, ಹಣ ನೀಡಿ, ಮದುವೆ ಮಾಡಿ, ಮಕ್ಕಳನ್ನು ನೀಡಿ, ಉದ್ಯೋಗವನ್ನು ನೀಡಿ ಎಂದು ಬೇಡುವದಕ್ಕಿಂತ ಈ ಎಲ್ಲ ತಾಪತ್ರಯಗಳಿಗೆ ಮೂಲವಾದ ಸಂಸಾರದಿಂದಲೇ ನಮ್ಮನ್ನು ಉದ್ಧರಿಸಿ ಎಂದು ಬೇಡಿಕೊಳ್ಳೋಣ. ರಾಯರು ಅವತರಿಸಿರುವದೇ ಅದಕ್ಕಾಗಿ. ಅವರು ನಮಗೆ

ಸದ್ಗುಣಗಳನ್ನು ನೀಡುತ್ತಾರೆ. ಯಾವುದರಿಂದ ನಾವು ದುರಹಂಕಾರಿಗಳಾಗುವದಿಲ್ಲವೋ ಅಂತಹ ಸಾತ್ವಿಕ ಸಂಪತ್ತನ್ನು ಕರುಣಿಸುತ್ತಾರೆ. ನಮ್ಮಿಂದ ಸತ್ಕರ್ಮಗಳ ಅನುಷ್ಠಾನ ಮಾಡಿಸುತ್ತಾರೆ. ನಾವು ಶಾಸ್ತ್ರಗಳ ಅಧ್ಯಯನ ಮಾಡುವಂತೆ ಅನಗ್ರಹಿಸುತ್ತಾರೆ. ಒಂದು ದಿನ ನಮ್ಮ ಹೃದಯಾಕಾಶದಲ್ಲಿ ನಮ್ಮ ಅಂತರ್ಯಾಮಿಯನ್ನು ನಮಗೆ ತೋರಿಸುತ್ತಾರೆ.

ಆ ಸೌಭಾಗ್ಯದ ದಿವಸ ಎಲ್ಲ ಸಜ್ಜನರಿಗೂ ಬಂದೊದಗಲಿ ಎಂದು ಶ್ರೀ ರಾಘವೇಂದ್ರಸ್ವಾಮಿಗಳನ್ನು ಭಕ್ತಿಯಿಂದ ಪ್ರಾರ್ಥಿಸಿ, ಶ್ರೀ ರಾಯರ ಇಂಥಾ ಪರಮಾದ್ಭುತ ಮಾಹಾತ್ಮ್ಯವನ್ನು, ಪ್ರಮೇಯವನ್ನು ತಿಳಿಸಿಕೊಟ್ಟ ಶ್ರೀ ವಾದೀಂದ್ರತೀರ್ಥಶ್ರೀಪಾದಂಗಳವರ ಚರಣಕ್ಕೆ ನನ್ನ ಸರ್ವಸ್ವವನ್ನೂ ಒಪ್ಪಿಸಿಕೊಳ್ಳುತ್ತೇನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು
ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,
ಶ್ರೀ ವೇದವ್ಯಾಸದೇವರಿಗೆ
ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491